4. ಕರ್ನಾಟಕ ರಾಜ್ಯ ರೇಷ್ಮೆ ಅಭಿವೃದ್ಧಿ ಸಂಸ್ಥೆ ತಲಘಟ್ಟಪುರ

ನಿಬಂಧನೆಗಳು

ಪ್ರತಿ ವರ್ಷವೂ ಬೆಲೆ ಸ್ಥಿರೀಕರಣ ನಿಧಿ ಪ್ರಾಧಿಕಾರದಿಂದ ಅನುಮೋದನೆ ಪಡೆದಿರಬೇಕು

ಅ) ಬಿಡುಗಡೆ ಮಾಡಲಾದ ಹಣವನ್ನು ನಿರ್ದಿಷ್ಟ ಯೋಜನೆಗಳಿಗೆ ಮಾತ್ರ ಉಪಯೋಗಿಸುವುದು.

ಆ) ಹಣವನ್ನು ಸಂಬಳ ಸಾರಿಗೆಗಳಿಗೆ ಉಪಯೋಗಿಸಬಾರದು.

ಇ) ಸಮಯಕ್ಕೆ ಸರಿಯಾಗಿ ಖರ್ಚಿನ ವಿವರಗಳನ್ನು ಬೆಲೆ ಸ್ಥಿರೀಕರಣ ನಿಧಿಗೆ ನೀಡಬೇಕು. ಪ್ರಗತಿಯನ್ನು ಪ್ರತಿ ಸಾರಿಯೂ ಬೆಲೆ ಸ್ಥಿರೀಕರಣ ನಿಧಿ ಪ್ರಾಧಿಕಾರಕ್ಕೆ ಒದಗಿಸಿ ಅದನ್ನು ವಿಸ್ತರಣಾ ಕಾರ್ಯಕ್ರಮದಲ್ಲಿ ಅಳವಡಿಸುವ ಬಗ್ಗೆ ವ್ಯವಸ್ಥೆ ಮಾಡಿ ಸದರಿ ಉಪಯೋಗವನ್ನು ರೇಷ್ಮೆ ಬೆಳಿಗಾರರಿಗೆ ತಲುಪುವಂತೆ ಮಾಡುವುದು.

3) ನಿರ್ದಿಷ್ಟ ಕಾರ್ಯಕ್ರಮಗಳಿಗೆ ಹಣವನ್ನು ಉಪಯೋಗಿಸಲಾಗಿದೆ.

ಸಾರ್ವಜನಿಕರಿಗೆ ಕಪ್ಪು ಮತ್ತು ಕೆಂಪು ಶಿಲೆ ನೀಡಲು ಸರ್ಕಾರವು ತೆಗೆದುಕೊಂಡ ಕ್ರಮ

647 - ಶ್ರೀ ಸಾದತ್ ಅಲೀಖಾನ್ (ಚನ್ನಪಟ್ಟಣ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರ್ವಜನಿಕರಿಗೆ ಕಪ್ಪು ಮತ್ತು ಕೆಂಪು ಶಿಲೆ ನೀಡಲು ಸರ್ಕಾರವು ತೆಗೆದುಕೊಂಡ ಕ್ರಮವೇನು?

ಆ) ಸಾರ್ವಜನಿಕರಿಗೆ ಕೆಂಪು ಮತ್ತು ಕಪ್ಪು ಶಿಲೆ ನೀಡಲು ಅನುಸರಿಸುವ ವಿಧಾನಗಳು?

ಇ) ಕಾರ್ಖಾನೆಯನ್ನು ಹೊಂದಿರುವವರಿಗೆ ಮಾತ್ರ ಕೆಂಪು ಮತ್ತು ಕಪ್ಪು ಶಿಲೆ ಮಂಜೂರು ಮಾಡುವ ಉದ್ದೇಶವೇನು?

ಶ್ರೀ ಡಿ.ಎ. ಚಿಣ್ಣಪ್ಪ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು) :

ಅ) ಉಭಯ ಸದನಗಳ ಸಮಿತಿಯು ಇತ್ತೀಚೆಗೆ ಉಪಖನಿಜಗಳ ನೀತಿಯ ಮೇಲೆ ತನ್ನ ವರದಿಯನ್ನು ಸಲ್ಲಿಸಿದ್ದು ಅದು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಮೇಲೆ ಕಾಣಿಸಿರುವ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಇ) ಮೇಲೆ ಕಾಣಿಸಿರುವ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಹೊಸ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭಿಸಲು ಮಾಡಿಕೊಂಡ ಅರ್ಜಿಗಳು ಹಾಗೂ ಕಂಪನಿಯಿಂದ ಅನುಮತಿಗಾಗಿ ಕಾದಿರುವ ಕಾರ್ಖಾನೆಗಳ ವಿವರ

471 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಹೊಸ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಿಸಲು ಅನುಮತಿಗಾಗಿ ಅರ್ಜಿಗಳು ಬಂದಿದೆಯೇ, (ಜಿಲ್ಲಾವಾರು ಹಾಗೂ ಕಾರ್ಖಾನೆಗಳ ಹೆಸರುಗಳನ್ನು ವಿವರವಾಗಿ ನೀಡುವುದು)

ಆ) ರಾಜ್ಯ ಸರ್ಕಾರದ ಅನುಮತಿಗಾಗಿ ಎಷ್ಟು ಅರ್ಜಿಗಳು ಸರ್ಕಾರದ ಮುಂದೆ ಇರುವುವು, (ಜಿಲ್ಲಾವಾರು ಹಾಗೂ ಕಾರ್ಖಾನೆಗಳ ಹೆಸರುಗಳ ಸಹಿತ ವಿವರ ಕೊಡುವುದು)

ಇ) ಈ ಪೈಕಿ ಖಾಸಗಿ ವಲಯಕ್ಕೆ ಹಾಗೂ ಸಹಕಾರಿ ವಲಯಕ್ಕೆ ಸೇರಿದ ಅರ್ಜಿಗಳ ಸಂಖ್ಯೆ ಎಷ್ಟು ?

ಈ) ಸಹಕಾರಿ ತಳಹದಿಯ ಮೇಲೆ ಪ್ರಾರಂಭಿಸಬೇಕೆಂದಿರುವ ಕಾರ್ಖಾನೆಗಳಿಗೆ ಮಂಜೂರಾತಿ ನೀಡುವಲ್ಲಿ ಬಹಳ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ, ಇದನ್ನು ತಪ್ಪಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮವೇನು ?

ಡಾ ಹೆಗ್ಗಪ್ಪ ಡಿ. ಲಮಾಣಿ (ಸಕ್ಕರೆ ಸಚಿವರು) :

ಅ) ಬಂದಿವೆ.

ಆ) ಪ್ರಸ್ತುತ ಎರಡು ಅರ್ಜಿಗಳು ಇರುತ್ತವೆ.

1) ಡಾಲ್ಮಿಯಾ ಸಿಮೆಂಟ್ಸ್, ನವದೆಹಲಿ, ಬೀದರ್ ಜಿಲ್ಲೆಯಲ್ಲಿ ಸ್ಥಾಪಿಸಲು

2) ಕೊಪ್ಪ ಷುಗರ್ಸ್ ಪ್ರಾಜೆಕ್ಟ್ಸ್, ಮದ್ದೂರು ಮಂಡ್ಯ ಜಿಲ್ಲೆ

ಇ) ಎರಡೂ ಖಾಸಗಿ ವಲಯದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ.

ಈ) ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರ ಅನುಮತಿ ನೀಡುವುದಿಲ್ಲ. ಆದರೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ. ಕೇಂದ್ರ ಸರ್ಕಾರವೇ ಅನುಮತಿ ನೀಡಬೇಕಾಗಿರುತ್ತದೆ. ರಾಜ್ಯ ಸರ್ಕಾರಕ್ಕೆ ಈ ಹಿಂದೆ 58 ಅರ್ಜಿಗಳು ಬಂದಿದ್ದು ಈ ಪೈಕಿ 12 ಅರ್ಜಿಗಳನ್ನು ಮಾತ್ರ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಇವುಗಳಲ್ಲಿ 6 ಸಹಕಾರಿ ಕ್ಷೇತ್ರದಲ್ಲೂ, 6 ಖಾಸಗಿ ಕ್ಷೇತ್ರದಲ್ಲೂ ಇರುತ್ತವೆ.

ಈ ಕಾರ್ಖಾನೆಗಳಿಗೆ ಅನುಮತಿ ನೀಡುವ ಬಗ್ಗೆ ಕೇಂದ್ರ ಮಟ್ಟದ ಪರಿಶೀಲನಾ ಸಮಿತಿ ದಿನಾಂಕ 24-6-93ರಂದು ದೆಹಲಿಯಲ್ಲಿ ಸಭೆ ಸೇರಿ ಪರಿಶೀಲನಾ ಕಾರ್ಯ ಮುಗಿಸಿದ್ದು ಕೇಂದ್ರ ಸರ್ಕಾರದಿಂದ ಅನುಮತಿ ಪತ್ರಗಳನ್ನು ನಿರೀಕ್ಷಿಸಲಾಗಿದೆ.

ಉ) ಒಂದು ಕ್ಷೇತ್ರಕ್ಕೆ ಮಂಜೂರಾತಿ ನೀಡಿ ಮತ್ತೊಂದು ಕ್ಷೇತ್ರಕ್ಕೆ ವಿಳಂಬವಾಗಿರುವ ಪ್ರಕರಣ ಯಾವುದೂ ಇಲ್ಲದಿರುವುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ - ಅ

ಕರ್ನಾಟಕ ರಾಜ್ಯದಲ್ಲಿ ಹೊಸ ಸಕ್ಕರೆ ಕಾರ್ಖಾನೆ ಸ್ಥಾಪನೆಗಾಗಿ ಸಲ್ಲಿಸಿರುವ

ಜಿಲ್ಲೆ		ಪ್ರಸ್ತಾವನೆಯ ಹೆಸರು	ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಉದ್ದೇಶಿಸಿರುವ ಸ್ಥಳ	ಕ್ಷೇತ್ರ
1. ಬಿಜಾಪುರ :	1.	ರೈತರ ಸ.ಸ.ಕಾ.ನಿ.	ರನ್ನನಗರ	ಸಹಕಾರಿ ವಲಯ
	2.	ಕೃಷ್ಣಾ ಘಟ್ಟಪ್ರಭಾ ಸ.ಸ.ಕಾ.ನಿ	ಟಠಡಲ್	”
	3.	ಮೈಸೂರು ಫ್ರೂಟ್ ಪ್ರಾಡಕ್ಸ್ ಬೆಂಗಳೂರು	ಸ್ಥಳ ಸೂಚಿಸಿಲ್ಲ	ಖಾಸಗಿ ವಲಯ
	4.	ಕೃಷ್ಣಾತೀರ ರೈತ ಸ.ಸ.ಕಾ. ಜಮಖಂಡಿ	ಚಿಕ್ಕಪಡಸಲಗಿ	ಕೋ-ಆಪರೇಟಿವ್
	5.	ಭೀಮಾಶಂಕರ್ ಸ.ಸ.ಕಾ. ಇಂಡಿ	ಮರಗೂರ್	”
	6.	ಮೆ : ಚಾಮುಂಡೇಶ್ವರಿ ಷುಗರ್ಸ್ ಲಿ. ಬೆಂಗಳೂರು	ರನ್ನನಗರ, ಮುಧೋಳ್ ತಾ :	ಖಾಸಗಿ ವಲಯ
	7.	ದೇವಿಪಲನಿ ಸ್ವಾಮಿ ಮತ್ತು ಕಂ.ಲಿ. ಮದ್ರಾಸ್	ಇಂಡಿ	”
	8.	ಕೆ.ಎಸ್.ಐ.ಐ.ಡಿ.ಸಿ. ಬೆಂಗಳೂರು	ಬಿಜಾಪುರ ಜಿಲ್ಲೆ	”
	9.	ಶಂಕರನಾರಾಯಣ ಷುಗರ್ಸ್ ಲಿ.	ಜಮಖಂಡಿ	”
	10.	ಕನೋರಿಯಾ ಇಂಡಸ್ಟ್ರೀಸ್ ಲಿ.	ಆಲಮಟ್ಟಿ	”
	11.	ಮುಧೋಳ್ ಷುಗರ್ಸ್ (ಎಸ್.ಟಿ. ಪಾಟೀಲ್)	ಮುಧೋಳ್	”
2. ಬೀದರ್ :	1.	ಅನುಭವ ಮಂಟಪ ಷುಗರ್ಸ್ ಲಿ. ಬೆಂಗಳೂರು	ಬಸವಕಲ್ಯಾಣ	ಖಾಸಗಿ ವಲಯ
	2.	ಮಹಾತ್ಮಾ ಗಾಂಧಿ ಸ.ಸ.ಕಾ. ಭಾಲ್ಕಿ	ಹುಂಜಿ : ಹಾಚಿಕ್‌ಮಠ	ಸಹಕಾರಿ ವಲಯ
	3.	ದಾಲ್ಮಿಯಾ ಸಿಮೆಂಟ್ಸ್ (ಭಾರತ ಲಿ.)ಹೊಸ ಡೆಲ್ಲಿ	ಮುತ್ತಂಗಿ, ಹುಮ್ನಾಬಾದ್ ತಾ :	ಖಾಸಗಿ ವಲಯ
	4.	ಜುವಾರಿ ಆಗ್ರೋ ಕೆಮಿಕಲ್ಸ್ ಲಿ. ಗೋವಾ	ಹಳ್ಳಿಖೇಡ, ಹುಮ್ನಾಬಾದ್‌ತಾ :	”
	5.	ಕೆ.ಎಸ್.ಐ.ಡಿ.ಸಿ. ಬೆಂಗಳೂರು	ಬಸವಕಲ್ಯಾಣ	”

	6.	ತಿಕ್ಕವರಪ್ಪು ಷುಗರ್ಸ್ ಹೈದರಾಬಾದ್	ಬಸವಕಲ್ಯಾಣ	”
	7.	ವಾಸುದೇವಿ ಕೈಲಾಸ್	ಸಂಗಮ್	”
	8.	ಬಸವೇಶ್ವರ ಷುಗರ್ಸ್	ಬಸವಕಲ್ಯಾಣ	”
	9.	ಕೊತಾರಿ ಇಂಡಸ್ಟ್ರೀಸ್ ಕಾರ್ಪೋರೇಷನ್	ಬಸವಕಲ್ಯಾಣ	”
	10.	ತಿರು ಅರೋರನ್ ಷುಗರ್ಸ್ ಲಿ.	ಬೀದರ್ ತಾಲ್ಲೂಕ್	”
	11.	ಸೌತ್ ಇಂಡಿಯಾ ಮತ್ತು ವಿನ್‌ಕೊಸ್ ಲಿ.	ಬೀದರ್	”
3. ಉತ್ತರ ಕನ್ನಡ :	1.	ಕೆ.ಎನ್. ಗುರುಸ್ವಾಮಿ ಮತ್ತು ಕಂ. ಬೆಂಗಳೂರು	ಮುರುಕವಾಡ ಹಳಿಯಾಲ ತಾ :	ಖಾಸಗಿ ವಲಯ
	2.	ಮೆ : ಗುರುಕೃಪಾ ಅರುಣಾ ಷುಗರ್ಸ್ ಮತ್ತು ಕೆಮಿಕಲ್ಸ್ ಬೆಂಗಳೂರು	ಹಳಿಯಾಲ	”
	3.	ಮೆ : ಇ.ಐ.ಡಿ.ಪ್ಯಾರಿ (ಇಂಡಿಯಾ) ಲಿ. ಮದ್ರಾಸ್	ಹಳಿಯಾಲ	”
	4.	ಮೆ : ಮಲೆನಾಡು ಕಾಳಿಕಾಂಬ ಎಸ್.ಎಸ್.ಕೆ. ಲಿ	ಬಸವಳ್ಳಿ	ಸಹಕಾರಿ ವಲಯ
4. ಮಂಡ್ಯ :	1.	ಕೊಪ್ಪಾ ಷುಗರ್ಸ್ ಪ್ರೋಜೆಕ್ಟ್ ಮದ್ದೂರು	ಕೊಪ್ಪಾ ಮದ್ದೂರು ತಾ :	ಖಾಸಗಿ ವಲಯ
	2.	ಮೆ : ಕೆ.ಇ. ಮೆಯಿದೂ ಪಾತಿಯಾರಾ	ಮಂಡ್ಯ ಜಿ.	”
	3.	ಮೆ : ನಾಕಾ ಮತ್ತು ಕಂ. ಮದ್ರಾಸ್	ಹಾಲಾಗುರ್, ಮಲವಳ್ಳಿ ತಾ :	”
5. ಬೆಂಗಳೂರು	1.	ಮೂಕಾಂಬಿಕಾ ಷುಗರ್ಸ್	ರಾಮನಗರಂ	”
6. ಶಿವಮೊಗ್ಗ	1.	ಕರ್ನಾಟಕ ಬ್ರೀವರೀಸ್ ಮತ್ತು ಡಿಸ್ಟಲರೀಸ್	ಚನ್ನಗಿರಿ	”
	2.	ಮೆ : ಸಹ್ಯಾದ್ರಿ ಷುಗರ್ಸ್ ಲಿ.	ಚನ್ನಗಿರಿ	”
	3.	ಸೂರ್ಯಲಕ್ಷ್ಮಿ ಷುಗರ್ಸ್ ಮಿಲ್ಸ್	ಚನ್ನಗಿರಿ	”
	4.	ಶ್ರೀಕಂಠದತ್ತ ನರಸಿಂಹರಾಜ ಒಡೆಯರ್	ಹೊಸನಗರ	”

7. ಮೈಸೂರು	1.	ಮೆ : ಆದಿಪಾರಶಕ್ತಿ ಷುಗರ್ಸ್	ಗುಂಡ್ಲುಪೇಟೆ ಅಥವಾ ಹೆಚ್.ಡಿ. ಕೋಟೆ	"
	2.	ರ್‍ಯಾಮಕೋ ಇಂಡಸ್ಟ್ರೀಸ್, ಮದ್ರಾಸ್	ಬನ್ನೂರು, ಟಿ. ನರಸೀಪುರ ತಾ :	"
	3.	ಶ್ರೀವಿದ್ಯಾ	ನಂಜನಗೂಡು	"
	4.	ಶ್ರೀ. ಪ್ರೇಂಗುಪ್ತಾ	ನಂಜನಗೂಡು	"
	5.	ಶ್ರೀ ಪಿ.ಕೆ. ಅಹಮದ್	ಮೈಸೂರು ಜಿ :	"
	6.	ದಿ. ಈಸ್ಟರನ್ ಕ್ಯಾಚರ್ ಟೀ. ಕಂ. ಲಿ	ಬನ್ನೂರು ಟಿ. ನರಸೀಪುರ ತಾ :	"
	7.	ಕೆ. ಚಂದ್ರಪ್ರಕಾಶ್	"	"
	8.	ಹೆಚ್. ದಾಸಪ್ಪಾ ಮತ್ತು ಸನ್ಸ್ (ಪ್ರೈ) ಲಿ.	"	"
	9.	ಹೆಚ್. ಯಶೋಧಮ್ಮ	ಬನ್ನೂರು ಟಿ. ನರಸೀಪುರ ತಾ :	ಖಾಸಗಿ ವಲಯ
	10.	ಶ್ರೀ. ದಯಾನಂದ ಸಾಗರ	ರಂಗನಾಥಪುರಂ ಟಿ.ನರಸೀಪುರ ತಾ :	"
	11.	ಶ್ರೀ ಚಂದ್ರಶೇಖರ್	ಪೆರಿಯಾಪಟ್ಟಣ	"
	12.	ಶ್ರೀ. ಇಂದಿರಾ ಷುಗರ್ಸ್, ಮೈಸೂರು	ಚೌಡಹಳ್ಳಿ	"
	13.	ಶ್ರೀ. ಮನೋರಥ ಮರಚಿಂಟೈಲ್ಸ್ ಲಿ.	ಸತ್ಯಗಾಲ	"
7. ಬೆಳಗಾಂ	1.	ಮಾರ್ಕಂಡೇಯ ಎಸ್.ಎಸ್.ಕೆ. ಬೆಳಗಾಂ ತಾ :	ಕಾಕಟಿ	ಸಹಕಾರಿ ವಲಯ
	2.	ಕರ್ನಾಟಕ ಸ್ಟೇಟ್ ಇಂಡಸ್ಟ್ರೀಯಲ್ ಇನ್‌ವೆಸ್ಟ್‌ಮೆಂಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿ.	ಸೆಗುಣಶಿ	ಖಾಸಗಿ ವಲಯ
	3.	ಸಿರಗುಪ್ಪಾ ಷುಗರ್ಸ್	ಸಿರಗುಪ್ಪಿ ಅಥಣಿ	"
	4.	ಶ್ರೀ. ಎಸ್.ಬಿ. ಪಾಟೀಲ್, ವಿಜಯನಗರ ಆಗ್ರೋ ಇಂಡಸ್ಟ್ರೀಸ್ (ಪ್ರೈ) ಲಿ.	ಖಾಗವಾಡ	"
	5.	ಮೆ : ಸಿಂಹಾದ್ರಿ ಷುಗರ್ಸ್ ಲಿ.	ರಾಯಬಾಗ್	"

	6.	ಮೆ : ಆನಂದಿ ಷುಗರ್ಸ್ ಲಿ.	ಸಾರಪ್ಪ, ಹಿಪ್ಪೇರಿ ತಾ :	”
	7.	ಮೆ : ಸನಾತನ್ ಇನ್‌ವೆಸ್ಟ್‌ಮೆಂಟ್ ಕಂ.ಲಿ	ತೊರಗಲ್, ರಾಮದುರ್ಗ ತಾ :	”
	8.	ಶ್ರೀ. ರಾಮ ಕೋ. ಷುಗರ್ಸ್ ಫ್ಯಾಕ್ಟರಿ ಲಿ.	ಬುಗಟಿ ಆಲೂರು, ಹುಕ್ಕೇರಿ ತಾ :	”
8. ಧಾರವಾಡ	1.	ಮಂಜುನಾಥ ಎಸ್.ಎಸ್.ಕೆ. (ನಿ)	ಅರವಟಗಿ ತಾ : ಧಾರವಾಡ	”
9. ಚಿತ್ರದುರ್ಗ	1.	ಶ್ರೀ ಎಸ್. ರಾಜಶೇಖರಪ್ಪಾ	ಮಲೆಬೆನ್ನೂರು ತಾ : ಹರಿಹರ	”
10.ಕೊಡಗು	1.	ಮೆ : ಇ.ಎನ್.ಐ.ಡಿ.ಪ್ಯಾರೀ (ಇಂಡಿಯಾ ಲಿ)	ಕುಶಾಲನಗರ	”
	ಒಟ್ಟು	58 ಅರ್ಜಿಗಳು		